# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಉಪ ನಿರ್ದೇಶಕರು (ತೋಟಗಾರಿಕೆ) ರವರ ಕಛೇರಿ, ಕೇಂದ್ರ ಕಛೇರಿ ಆವರಣ, ಅನೆಕ್ಸ್-03 ಕಟ್ಟಡ**

ಸಂಖ್ಯೆ:ಉ.ನಿ.(ತೋ)/ಪಿ.ಆರ್/220/2024-25 ದಿನಾಂಕ: 16.8 .2024

ರವರಿಗೆ,

ವಲಯ ಆಯುಕ್ತರು
(ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ,
ಮಹದೇವಪುರ, ಬೊಮ್ಮನಹಳ್ಳಿ, ದಾಸರಹಳ್ಳಿ
ಮತ್ತು ರಾ.ರಾ.ನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ವಿಷಯ: ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಸಾರ್ವಜನಿಕರ ಉಪಯೋಗಕ್ಕೆ ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ: ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರಿಗೆ ಶ್ರೀ ಸಿ.ಕೆ.ರಾಮಮೂರ್ತಿ, ಶಾಸಕರು ಜಯನಗರ ವಿಧಾನಸಭಾ ಕ್ಷೇತ್ರ ರವರು ಮತ್ತು ಇತರ ಶಾಸಕರುಗಳು ಸಹಿ ಮಾಡಿರುವ ಪತ್ರದ ದಿನಾಂಕ:23.07.24

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ವಾಯು ವಿಹಾರಕ್ಕೆಂದು ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲೆಂದು ಸಮಯವನ್ನು ಮಾರ್ಪಡಿಸಿ ಬೆಳಗ್ಗೆ 5.00 ರಿಂದ ರಾತ್ರಿ 10.00 ರ ವರೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ.

ಮುಂದುವರೆದು ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳಿಂದ ಉದ್ಯಾನವನಗಳ ಬದಲಾದ ಸಮಯಕ್ಕೆ ದೂರುಗಳು ಬಂದಿರುತ್ತವೆ. ಈ ಮಧ್ಯಂತರ ಸಮಯದಲ್ಲಿ ಉದ್ಯಾನವನ ಸ್ವಚ್ಛತೆಗೆ ಕಾಲಾವಕಾಶ ಬೇಕಾಗಿರುವುದರಿಂದ ಮೊದಲಿನಂತೆ ಇರುವ ಸಮಯ ಬೆಳಗ್ಗೆ 05.00 ರಿಂದ 10.00 ರ ವರೆಗೆ ಮತ್ತು ಸಂಜೆ 04.00 ರಿಂದ 08.00 ರ ವರೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಯ ಬದಲಾವಣೆ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಶ್ರೀ ಸಿ.ಕೆ.ರಾಮಮೂರ್ತಿ, ಶಾಸಕರು ಜಯನಗರ ವಿಧಾನಸಭಾ ಕ್ಷೇತ್ರ ರವರು ಮತ್ತು ಇತರ ಶಾಸಕರುಗಳು ಉಲ್ಲೇಖದಲ್ಲಿರುವ ಪತ್ರದಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಉದ್ಯಾನವನಗಳ ಸಮಯವನ್ನು ಮಾರ್ಪಡಿಸುವ ಬಗ್ಗೆ ಕೂಡಲೇ [redacted] ಅಭಿಪ್ರಾಯವನ್ನು ನೀಡಲು ತಿಳಿಸಿದೆ.

14.8.24

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1) ವಿಶೇಷ ಆಯುಕ್ತರು (ಎಫ್.ಇ.ಸಿ.ಸಿ.) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2) ಉಪ ನಿರ್ದೇಶಕರು ತೋಟಗಾರಿಕೆ ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3) ಎಲ್ಲಾ ವಲಯಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4) ಕಛೇರಿ ಕಡತಕ್ಕೆ